## ಚಿಕ್ಕಪ್ಪನ ಸಿಗರೇಟು



ಸುಮಾರು ಐವತ್ತು ವರುಷಗಳ ಹಿಂದಿನ ಮಾತು. ಒಮ್ಮೆ ನಮ್ಮ ತಾತಾ ಊರಿನಿಂದ, ಹೊನ್ನಾವರದಲ್ಲಿದ್ದ ನಮ್ಮ ಚಿಕ್ಕಪ್ಪನ ಮನೆಗೆ ಬಂದಿದ್ದರು. ತಾತಾನಿಗೆ ದಿನಾ ರಾತ್ರಿ ಒಂದು ಬರ್ಕ್ಲೀ ಸಿಗರೇಟ್ (ಫಿಲ್ಟರ್ ರಹಿತ) ಸೇದುವ ಅಭ್ಯಾಸ ಇತ್ತು. ಒಂದು ದಿನ ನಮ್ಮ ತಾತಾ, ನಮ್ಮ ಚಿಕ್ಕಪ್ಪ ಮಾತನಾಡುತ್ತಾ ಕುಳಿತಿದ್ದಾಗ ಅಲ್ಲೇ ಇದ್ದ ನನಗೆ, ನಮ್ಮ ತಾತಾ ಸಿಗರೇಟ್ ತರಲು ಹೇಳಿದರು. ಅದಕ್ಕೆ ನಾನು, 'ಯಾವ ಸಿಗರೇಟ್ ತರಲಿ ತಾತಾ' ಎಂದೆ.

ಅದಕ್ಕೆ ತಾತನವರು 'ಅದೇ ಕಣೋ ಹಿಂದೆ ಕೆಂಪಗೆ (ಅಂದರೆ ಫಿಲ್ಟರ್) ಇರುತ್ತಲ್ಲಾ ಆ ಸಿಗರೇಟು' ಎಂದು ಹೇಳಿದರು. ಅದಕ್ಕೆ ನಾನು ಅಲ್ಲೇ ಇದ್ದ ಚಿಕ್ಕಪ್ಪನವರನ್ನು ತೋರಿಸಿ, 'ಅದೇ ಚಿಕ್ಕಪ್ಪ ಸೇದ್ತಾರಲ್ಲಾ ಆ ಸಿಗರೇಟಾ ತಾತಾ' ಎಂದೆ. (ನಮ್ಮ ಚಿಕ್ಕಪ್ಪ ಸಿಗರೇಟ್ ಸೇದುವ ವಿಚಾರ ನಮ್ಮ ತಾತನಿಗೆ ಗೊತ್ತಿರಲಿಲ್ಲ.) ಪಾಪ ಅಲ್ಲೇ ಇದ್ದ ನಮ್ಮ ಚಿಕ್ಕಪ್ಪನ ಫಜೀತಿ ನೋಡಬೇಕಾಗಿತ್ತು.

**ಲಿಂಗದಹಳ್ಳಿ ಚಂದ್ರಶೇಖರ್**

---



## ರಜನೀಗಂಡ!

ಮೊಮ್ಮಗಳಿಗೆ ನನ್ನ ಕೈತೋಟದಲ್ಲಿ ಬೆಳೆದಿದ್ದ ಗಿಡಗಳ ಪರಿಚಯ ಮಾಡಿಕೊಡುತ್ತಿದ್ದೆ. ಕನ್ನಡ, ಇಂಗ್ಲಿಷ್ ಅಲ್ಲದೇ ಹಿಂದಿ ಶಬ್ದಗಳನ್ನು ಪರಿಚಯಿಸುತ್ತಿದ್ದೆ. ಸುಗಂಧರಾಜ ಗಿಡದಲ್ಲಿ ಹೂ ಅರಳಿ ನಿಂತಿತ್ತು. ಅದರ ಹಿಂದಿ ಹೆಸರು ರಜನೀಗಂಧ ಎಂದು ಪರಿಚಯಿಸಿದಾಗ ಮೊಮ್ಮಗಳು 'ಓಹೋ, ಅಭಿಲಾಷ್ ಅಂತಾನಾ' ಎಂದು ಉದ್ಗಾರ ತೆಗೆದಳು.

ನನಗೆ ಅರ್ಥವಾಗಲಿಲ್ಲ. ತಕ್ಷಣ ಅವರಮ್ಮ ವಿವರಿಸಿದಳು ಮೊಮ್ಮಗಳ ಅಪ್ಪನ ಕಸಿನ್ ಅಭಿಲಾಷ್, ಅವನ ಹೆಂಡತಿ ರಜನಿ. ಹೀಗಾಗಿ ರಜನೀಗಂಧವನ್ನು ರಜನೀಗಂಡ ಅಂತ ಕೇಳಿಸಿಕೊಂಡಿದ್ದಾಳೆ, ಅಷ್ಟೇ!

**ಶ್ರೀಧರ ಬಾಣಾವರ**

ಕಲೆ: ಗಣೇಶ ಆಚಾರ್ಯ